




ಜೆಮಾ ಬಜಾರಿನಲ್ಲಿ ಉಕ್ಕಿನ ಕಂಟೈನ್ ರ ಒಳಗಿನ ಅಂಗಡಿ



ಪಾಮಿರ್ ಹೆದ್ದಾರಿ ಮೂಲಕ ಓಶ್ ನಗರ ಪ್ರವೇಶ ಮಾಡಿದ ಲೇಖಕ

ವೈವಿಧ್ಯಗಳು, ಜೊತೆಗೆ ಪುರಾತನ ಆಯುಧಗಳು, ಮಣ್ಣಿನ ಕುಡಿಕೆಗಳು, ಸಾಂಪ್ರದಾಯಿಕ ಕರಕುಶಲ ವಸ್ತುಗಳು, ಚರ್ಮದ ತಯಾರಿಕೆಗಳು, ಹಳೆಯ ಚಿತ್ರಪಟಗಳು, ಭೂಪಟಗಳು ಪ್ರದರ್ಶನಕ್ಕಿವೆ.

ರಬಾತ್ ಅಬ್ದುಲ್ ಖಾನ್ ಮಸೀದಿ: ಮಧ್ಯೆ ಏಷ್ಯಾದಲ್ಲೇ, ಅತ್ಯಂತ ಪ್ರಾಚೀನವಾದ ಈ ಮಸೀದಿಯನ್ನು, ಇತ್ತೀಚಿಗೆ ಅತ್ಯಾಕರ್ಷಕ ಎನ್ನುವಂತೆ ಪುನರ್‌ನಿರ್ಮಾಣ ಮಾಡಲಾಗಿದೆ.

ಜೆಮಾ ಬಜಾರ್ (Jayma Bazar): ಮಧ್ಯೆ ಏಷ್ಯಾದ ಅತೀ ದೊಡ್ಡ ಮಾರ್ಕೆಟ್ ಎಂದು ಹೆಸರು ಪಡೆದ ಜೆಮಾ ಬಜಾರ್, ಒಂದು ಕಿ.ಮೀ.ಗೂ ಹೆಚ್ಚು ಉದ್ದಕ್ಕೆ ಹರಡಿಕೊಂಡಿದೆ. ಮಾರ್ಕೆಟ್ ನಡುವಿನಲ್ಲಿ ತಣ್ಣಗೆ ಹರಿಯುವ ಅಕ್– ಬೂರಾ (Ak –Buura River) ನದಿಯ ಇಕ್ಕೆಲಗಳಲ್ಲಿ ವಿಶಾಲವಾಗಿ ಪಸರಿಸಿದ, ಸದಾ ಕಿಕ್ಕಿರಿದ ಜನ ನಿಬಿಡ ಬಜಾರಿನಲ್ಲಿ ಸಿಗದ ವಸ್ತುವೇ ಇಲ್ಲ. ಹಣ್ಣು, ತಾಜಾ ತರಕಾರಿಗಳು, ದಿನ ಬಳಕೆಯ ವಸ್ತುಗಳು, ದಾನ್ಯಗಳು, ಮೀನು, ಮಾಂಸ, ತರಹೇವಾರಿ ಚಹಾಪುಡಿ, ಪಿಂಗಾಣಿ ಸಾಮಾನುಗಳು, ಬಟ್ಟೆ, ಆಭರಣಗಳು, ಸ್ಥಳೀಯ ಮದ್ದುಗಳು, ನೆನಪಿನ ಕಾಣಿಕೆಗಳು.. ಅಂಗಡಿಗಳ ಸಾಲೇ ಸಾಲು.

ವಿಶೇಷವೆಂದರೆ, ಪ್ರತಿಯೊಂದು ಅಂಗಡಿ ಹಡಗುಗಳಲ್ಲಿ ಸರಕು ಸಾಗಿಸಲು ಉಪಯೋಗಿಸುವ ಬೃಹತ್ ಉಕ್ಕಿನ ಕಂಟೈನರ್‌ಗಳ ಒಳಗೆ! ಕಂಟೈನರ್‌ನ ಮೂರು ಬದಿಗಳಲ್ಲಿ ನೀಟಾಗಿ ಜೋಡಿಸಿಟ್ಟ ಸಾಮಾನು, ಸರಂಜಾಮುಗಳನ್ನು ಆರಿಸಲು, ನಡುವಿರುವ ಖಾಲಿ ಜಾಗದಲ್ಲಿ ನೀವು ಸಲೀಸಾಗಿ ಒಳಗಿನ ತನಕ ನಡೆದು ಬಿಡಬಹುದು.

ಈ ಬಜಾರಿನ ಉತ್ತರ ತುದಿಯಲ್ಲಿ ಕಿರ್ಗಿಸ್ತಾನದಲ್ಲೇ ಅತ್ಯಂತ ದೊಡ್ಡದಾದ, ವಿಶಾಲವಾದ, ಪೂರ್ತಿ ಮರದಲ್ಲೇ ನಿರ್ಮಿಸಿದ ಶೈದ್ ತೇಪಾ ಮಸೀದಿ ( Shaid Tepa Mosque )ಇದೆ. ಬಜಾರಿನ ಪಶ್ಚಿಮ ಹಿಂಭಾಗದ ಉದ್ದಕ್ಕೂ ಸಾಂಪ್ರದಾಯಿಕ 'ಚಾಯ್ ಖಾನಾ'ಗಳಿವೆ. ಕೊಡುವ, ಕೊಳ್ಳುವ ವ್ಯಾಪಾರದ ಭರಾಟೆಯ ನಡುವೆಯೂ, ಈ ಚಾಯ್‌ಖಾನೆಗಳಲ್ಲಿ ಇಲ್ಲಿನ ಜನ ತಮ್ಮವರೊಡನೆ ಆರಾಮವಾಗಿ ಕೂತು ಚಹಾ ಕುಡಿಯುತ್ತ, ಲೋಕಲ್ ಖಾದ್ಯಗಳನ್ನು ಸವಿಯುತ್ತಾ, ಹರಟೆ ಹೊಡೆಯುತ್ತ ಕಷ್ಟ–ಸುಖ ಹಂಚಿಕೊಳ್ಳುತ್ತ, ಸಂಗೀತ ವಾದ್ಯಗಳನ್ನು ನುಡಿಸುತ್ತ, ಹಾಡುತ್ತ, ಕುಣಿಯುತ್ತ ಸಂಭ್ರಮದ, ಹಬ್ಬದ ವಾತಾವರಣವನ್ನೇ ನಿರ್ಮಿಸಿಬಿಡುತ್ತಾರೆ. ಈ ಮಾರ್ಕೆಟ್‌ನಲ್ಲಿ ಹೊತ್ತು ಹೋದದ್ದೇ ಗೊತ್ತಾಗುವುದಿಲ್ಲ.

ಓಶ್ ನಗರದ ಮನೋಹರ ದೃಶ್ಯಗಳು, ಹಿತಕರವಾದ ಹವಾಮಾನ, ಆತ್ಮೀಯವಾಗಿ ವ್ಯವಹರಿಸುವ ಜನರ ಸಭ್ಯತೆ ಇಲ್ಲಿನ ವಿಶೇಷ. ನಾನು ಉಳಿದುಕೊಂಡಿದ್ದ ಹೊಟೇಲ್‌ನ ಅಚ್ಚು–ಕಟ್ಟು , ಶುಭ್ರತೆ, ಸಿಬ್ಬಂದಿಗಳ ನಯ, ವಿನಯದ ನಡುವಳಿಕೆ.. ಎಲ್ಲವೂ ಇಲ್ಲಿ ಕಳೆದ ದಿನಗಳ ಮಧುರವಾದ, ಮರೆಯದ ಅನುಭವಗಳನ್ನು ಕಟ್ಟಿಕೊಟ್ಟವು.